# ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 03-10-2022

ಬಸವ ಕಲ್ಯಾಣ ನಗರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 136/2022 ಕಲಂ 511, 454, 380 ಐಪಿಸಿ :-

ದಿನಾಂಕ 02/10/2022 ರಂದು 20:00 ಗಂಟೆಗೆ ಶ್ರೀ ಕಿರಣ ತಂದೆ ಸಂಗ್ರಾಮ ಪಾಟೀಲ್ ವಯಸ್ಸು 27 ವರ್ಷ, ಜಾತಿ ಲಿಂಗಾಯತ ಉ: ಕಿರಾಣಿ ಅಂಗಡಿ ಸಾ: ಪರತಾಪುರ ರವರು ಠಾಣೆಗೆ ಹಾಜರಾಗಿ ದೂರು ನೀಡಿದರ ಸಾರಾಂಶವೆನೆಂದರೆ ಇವರ ಅಜ್ಜಿ ಬಸಮ್ಮಾ ಪಾಟೀಲ ರವರಿಗೆ ಆರಾಮ ಇಲ್ಲದ ಕಾರಣ ನಮ್ಮ ಅತ್ತೆ ನಿರ್ಮಲಾ ಗಂಡ ಶರಣಪ್ಪಾ ಮಾಹಜಾನ ಸಾ: ಪರತಾಪುರ ರವರು ದಿನಾಂಕ 01/10/2022 ರಂದು ಮುಂಜಾನೆ 10:00 ಗಂಟೆಗೆ ಮಾತನಾಡಲು ನಮ್ಮ ಮನೆಗೆ ಬಂದಿರುತ್ತಾರೆ. ಹೀಗಿರುವಾಗ ದಿನಾಂಕ 01/10/2022 ರಂದು 11:30 ಗಂಟೆಗೆ ನಾನು ನಮ್ಮ ಅತ್ತೆ ನಿರ್ಮಲಾ ರವರಿಗೆ ಅವರ ಮನೆಗೆ ಬಿಡಲು ಅವರ ಜೋತೆಗೆ ಹೋಗಿದ್ದು ಅವರ ಮನೆಗೆ ಹೋಗಿ ಮನೆಯ ಗೇಟ ತಗೆದು ಒಳಗೆ ಹೋಗಲು ಮನೆಯ ಮುಖ್ಯ ದ್ವಾರಕ್ಕೆ ಹಾಕಿದ ಕೀಲಿ ಮುರಿದಿದ್ದು ಅಲ್ಲದೆ ಬಾಗೀಲ ಹಾಗೇ ಮುಚ್ಚಿದ್ದು ಕಂಡು ಗಾಬರಿಗೊಂಡು ಒಳಗೆ ಹೋಗಿ ನೋಡಲು ಒಳಗಡೆ ಇದ್ದ ಕೊಣೆಯ ಬಾಗೀಲಿಗೆ ಹಾಕಿದ ಕೀಲಿ ಮುರಿದಿದ್ದು ಆ ಕೊಣೆಯು ತರೆದಿದ್ದು ಕೊಣೆಯ ಒಳಗೆ ಹೋಗಿದ್ದು ಕೊಣೆಯಲ್ಲಿ ಇದ್ದ ಆಲಮಾರಿಯನ್ನು ನೋಡಲು ಅದರ ಮೇಲೆ ಇದ್ದ ಆಲಮಾರಿಯ ಕೀ ಯನ್ನು ತಗೆದುಕೊಂಡು ಆಲಮಾರಿ ತರೆದು ಅದರೊಳಗೆ ಇದ್ದ ತಿಜೋರಿಯನ್ನು ಮುರಿದು ಯಾರೋ ಅಪರಿಚಿತ ಕಳ್ಳರು ಕಳವು ಮಾಡಲು ಪ್ರಯತ್ನ ಮಾಡಿರುತಾರೆ. ಮನೆಯಲ್ಲಿ ತಂದೆ-ತಾಯಿ ಯವರಿಗೆ ವಿಚಾರಿಸಿ ಬಂದು ದೂರು ಕೊಡಲು ತಡವಾಗಿರುತ್ತದೆ. ಕಾರಣ ದಿನಾಂಕ 01/10/2022 ರಂದು ಮುಂಜಾನೆ 10:00 ಗಂಟೆಯಿಂದ 11:30 ಗಂಟೆಗೆ ಮಧ್ಯ ಅವದಿಯಲ್ಲಿ ಯಾರೋ ಅಪರಿಚಿತ ಕಳ್ಳರು ನಮ್ಮ ಅತ್ತೆ ನಿರ್ಮಲಾ ರವರ ಮನೆಯ ಬಾಗೀಲ ಕೀಲಿ ಮುರಿದು ಒಳಗೆ ಕೊಣೆಯಲ್ಲಿ ಇದ್ದ ಆಲಾಮಾರಿಯಲ್ಲಿನ ತಿಜೋರಿಯನ್ನು ಒಡೆದು ಕಳ್ಳತನ ಮಾಡಲು ಪ್ರಯತ್ನ ಮಾಡಿದ ಕಳ್ಳರ ವಿರುದ್ದ ಸೂಕ್ತ ಕಾನೂನು ಕ್ರಮ ಜರುಗಿಸಲು ವಿನಂತಿ ಇರುತ್ತದೆ ಅಂತ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

*ಬೇಮಳಖೇಡಾ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 48/2022 ಕಲಂ 379, 511 ಐಪಿಸಿ :-*

ದಿನಾಂಕಃ02-10-2022 ರಂದು ಮುಂಜಾನೆ 1100 ಗಂಟೆಯ ಸುಮಾರಿಗೆ ಫಿರ್ಯಾದಿ ಶ್ರೀ ಉಮೇಶ ತಂದೆ ಮಾಣಿಕ ನಿರ್ಣಾ ವಯಃ28 ವರ್ಷ ಜಾತಿಃಕುರುಬ ಉಃಒಕ್ಕಲುತನ ಸಾಃಬಸಿರಾಪೂರ ಇವರು ಠಾಣೆಗೆ ಹಾಜರಾಗಿ ಒಂದು ಲಿಖಿತ ಫಿರ್ಯಾದಿ ದೂರನ್ನು ಹಾಜರುಪಡಿಸಿದರ ಸಾರಾಂಶವೆನೆಂದರೆ ದಿನಾಂಕಃ01-10-2022 ರಂದು ಸಾಯಂಕಾಲ 6-00 ಗಂಟೆಯ ಸುಮಾರಿಗೆ ಧನಗಳನ್ನು ಮತ್ತು ಆಡನ್ನು ಹೊಲಕ್ಕೆ ಹೋಗಿ ಮೇಯಿಸಿಕೊಂಡು ಬಂದು ದನದ ಕೊಟ್ಟಿಗೆಯಲ್ಲಿ ಕಟ್ಟಿ ಊಟ ಮಾಡಿಕೊಂಡು ಮನೆಯಲ್ಲಿ ಮಲಗಿಕೊಂಡಿರುತ್ತಾರೆ ಹಿಗಿರುವಾಗ ದಿನಾಂಕಃ02-10-2022 ರಂದು ರಾತ್ರಿ 3-00 ಎ ಎಂ ಗಂಟೆಯ ಸುಮಾರಿಗೆ ಎದ್ದು ಹೊರಗೆ ಬಂದಾಗ ಮನೆಯ ಪಕ್ಕದಲ್ಲಿ ಇರುವ ಕೊಟ್ಟಿಗೆಯ ಕಡೆಯಿಂದ ದನಗಳ ಮತ್ತು ಆಡು ಚಿರಾಡುತ್ತಿದ್ದ ಶಬ್ದ ಕೇಳಿ ಬಂದಿದ್ದರಿಂದ ಕೂಡಲೆ ಧನದ ಕೊಟ್ಟಿಗೆಯ ಕಡೆಗೆ ಹೋಗಿ ನೋಡಲಾಗಿ ಕೊಟ್ಟಿಗೆಯಲ್ಲಿ ಕಟ್ಟಿದ ಆಡಿನ ಹತ್ತಿರ ಒಬ್ಬ ವ್ಯಕ್ತಿ ಇದ್ದು ಅವನು ಅದಕ್ಕೆ ಕಟ್ಟಿದ್ದ ಹಗ್ಗ ಬಿಡುತ್ತಿದ್ದಾಗ ಅವನೆಗೆ ಏ ಕಳ್ಳ ಯಾರೋ ನೀನು ನಮ್ಮ ಕೊಟ್ಟಿಗೆಯಲ್ಲಿ ಏನು ಮಾಡುತ್ತಿದ್ದಿಯಾ ಅಂತಾ ಕೇಳಿದಾಗ ಸದರಿಯವನು ನನಗೆ ನೋಡಿ ಅಲ್ಲಿಂದ ಗಾಬರಿಗೊಂಡು ಓಡಿ ಹೋಗುತ್ತಿದ್ದಾಗ ಧನದ ಕೊಟ್ಟಿಗೆಯ ಹತ್ತಿರ ಇದ್ದ ಸೆಪ್ಟಿ ಟ್ಯಾಂಕಿನ ನೀರಿನಲ್ಲಿ ಒಮ್ಮೆಲೆ ಬಿದ್ದನು ಅದರಿಂದ ಧಬ್ಬ ಅಂತಾ ಶಬ್ದ ಕೇಳಿ ಬಂದಿದ್ದರಿಂದ ನಮ್ಮ ಮನೆಯ ಪಕ್ಕದ ಮನೆಯರಾದ ಪುಂಡಲಿಕರವರು ಎದ್ದು ಅಲ್ಲಿಗೆ ಬಂದಿದ್ದು ಇಬ್ಬರು ಸೇರಿ ಸೆಪ್ಟಿ ಟ್ಯಾಂಕಿನಲ್ಲಿ ಇಣುಕಿ ಬ್ಯಾಟರಿ ಹಾಕಿ ನೊಡಲಾಗಿ ಅವನು ನಮ್ಮ ಗ್ರಾಮದ ನಾಗಪ್ಪಾ ತಂದೆ ಕಾಶಪ್ಪಾ ಪಲ್ಲೇರ ಇರುತ್ತಾನೆ ಸದರಿಯವನಿಗೆ ಗುರುತಿಸಿ ಸೆಪ್ಟಿ ಟ್ಯಾಂಕಿನಿಂದ ಮೇಲೆ ತಗೆದು ಇಂದು ಮುಂಜಾನೆ ಠಾಣೆಗೆ ಕರೆದುಕೊಂಡು ಬಂದಿದ್ದು ಸದರಿಯವನು ನಮ್ಮ ಧನದ ಕೊಟ್ಟಿಗೆಯಲ್ಲಿ ಕಟ್ಟಿದ್ದ ಮೂರು ವರ್ಷದ ಆಡಿನ ಅಂದಾಜು ಕಿಮ್ಮತ್ತು 12000/ ರೂ ಬೆಲೆಬಾಳುವ ಆಡು ಕಳವು ಮಾಡಲು ಪ್ರಯತ್ನ ಮಾಡಿದ್ದು ಸದರಿ ನಮ್ಮ ಗ್ರಾಮದ ನಾಗಪ್ಪಾ ತಂದೆ ಕಾಶಪ್ಪಾ ಪಲ್ಲೇರ ವಯಃ40 ವರ್ಷ ಜಾತಿಃಗೊಲ್ಲಾ ಯಾಧವ ಉಃಕೂಲಿ ಕೆಲಸ ಇತನ ವಿರುದ್ದ ಸೂಕ್ತ ಕಾನೂನು ಕ್ರಮ ಕೈಕೊಳ್ಳಲು ಮಾನ್ಯರಲ್ಲಿ ವಿನಂತಿ ಇರುತ್ತದೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಕೊಳ್ಳಲಾಯಿದೆ.